# ದಸರಾ
# ಮಹಿಳೆಯ ಒಂಬತ್ತು ಹಂತಗಳ ಪಯಣ

ಕರ್ನಾಟಕದಲ್ಲಿ ದಸರಾ ಹಬ್ಬವೆಂದರೆ ಕೇವಲ ವಿಜಯದ ಸಂಭ್ರಮವಲ್ಲ. ಇದು ದೇವಿಯ ಒಂಬತ್ತು ರೂಪಗಳ ಆರಾಧನೆ, ನವರಾತ್ರಿಯ ಒಂಬತ್ತು ರಾತ್ರಿಗಳಲ್ಲಿ ಒಂಬತ್ತು ಶಕ್ತಿಗಳನ್ನು ಸ್ಮರಿಸುವ ಯಾತ್ರೆ. ಪ್ರತಿಯೊಂದು ರೂಪವೂ ಮಹಿಳೆಯ ಜೀವನದ ಒಂದೊಂದು ಹಂತದ ಸಂಕೇತವಾಗಿ ತೋರುತ್ತದೆ. ಹೆಣ್ಣುಮಗಳ ಜೀವನ ಪಯಣವು ಹೇಗೆ ಶಕ್ತಿಯ ರೂಪಾಂತರವಾಗಿ ಸಮಾಜದಲ್ಲಿ ಬೆಳೆದೀತು ಎಂಬುದನ್ನು ಈ ನವರಾತ್ರಿ ರೂಪಗಳು ಹೃದಯಸ್ಪರ್ಶಿಯಾಗಿ ವಿವರಿಸುತ್ತವೆ.

**ಅಂಕಿತಾ ಅಮರ್,** ನಟಿ



## 1. ಶೈಲಪುತ್ರಿ

**ಮಗಳ ರೂಪ**

ಮಹಿಳೆಯ ಜೀವನದ ಆರಂಭವನ್ನು ಶೈಲಪುತ್ರಿಯ ರೂಪ ತೋರ್ಪಡಿಸುತ್ತದೆ. ಮನೆಯ ಮಗಳು ಎಂಬುದು ಆಕೆಯ ಮೊದಲ ಹಂತ. ಮಗಳ ನಗು, ನಿಷ್ಕಲ್ಮಶ ಮನಸ್ಸು, ಅಪ್ಪ ಅಮ್ಮನ ಪ್ರೀತಿಯ ಅಂಕಣದಲ್ಲಿ ಬೆಳೆದು ಬರುವ ಆ ಹಂತವೇ ದೇವಿಯ ಮೊದಲ ರೂಪದ ಸೌಂದರ್ಯ. ಮಗಳು ಮನೆಯ ಆನಂದ, ಅಪ್ಪನ ಹೆಮ್ಮೆ, ತಾಯಿಯ ಕಣ್ಣಿನ ಮಿನುಗು. ಶೈಲಪುತ್ರಿಯಂತೆ, ಮಗಳು ಕುಟುಂಬದ ಆಧಾರ.



## 2. ಬ್ರಹ್ಮಚಾರಿಣಿ

**ವಿದ್ಯಾರ್ಥಿನಿಯ ರೂಪ**

ಮಹಿಳೆ ವಿದ್ಯಾಭ್ಯಾಸ ಪ್ರವೇಶಿಸುತ್ತಾಳೆ. ಜ್ಞಾನ, ಅನುಭವ, ನೀತಿಮೌಲ್ಯಗಳ ಅರಿವು – ಇವೆಲ್ಲವೂ ಅವಳ ಜೀವನವನ್ನು ಕಟ್ಟಿಕೊಡುತ್ತವೆ. ಬ್ರಹ್ಮಚಾರಿಣಿ ರೂಪದಲ್ಲಿ ಅವಳು ಧ್ಯಾನ, ಶ್ರದ್ಧೆ, ತಾಳ್ಮೆ ಹಾಗೂ ದೃಢನಿಶ್ಚಯದ ಸಂಕೇತ. ಕಲಿಯುವ, ಗ್ರಹಿಸುವ, ಸಾಧಿಸುವ ಶಕ್ತಿ ಹೆಣ್ಣಿನ ಹೃದಯದಲ್ಲೇ ಅಡಗಿದೆ. ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲೂ ಹೆಣ್ಣು ತನ್ನ ವಿದ್ಯೆಯಿಂದ, ಬುದ್ಧಿಯಿಂದ, ಪರಿಶ್ರಮದಿಂದ ಬೆಳಕು ಹರಡಲು ಆರಂಭಿಸುವ ಹಂತವಿದು.

## 3. ಚಂದ್ರಘಂಟಾ

**ಪತ್ನಿಯ ರೂಪ**

ಮಹಿಳೆ ಜೀವನ ಸಂಗಾತಿಯನ್ನು ಪಡೆಯುವ ಹಂತದಲ್ಲಿ ಚಂದ್ರಘಂಟಾ ರೂಪ ಮೂಡುತ್ತದೆ. ಇಲ್ಲಿ ಅವಳು ಕೇವಲ ಅಲಂಕಾರವಾಗಿ ಅಲ್ಲ, ಸಮಾನ ಶಕ್ತಿಯಾಗಿ ಕಾಣಿಸಿಕೊಂಡು, ತನ್ನ ಪತಿಯೊಂದಿಗೆ ಸಮತೋಲನದ ಜೀವನ ನಡೆಸುತ್ತಾಳೆ. ಹೆಣ್ಣಿನ ಶಕ್ತಿ ಕೇವಲ ಗೃಹದ ಅಂಗಳದಲ್ಲಿ ಮಾತ್ರವಲ್ಲ, ಸಮಾಜದ ಪ್ರತಿಯೊಂದು ತಾಣದಲ್ಲೂ ಗಂಡನೊಂದಿಗೆ ಹೆಜ್ಜೆ ಹಾಕುತ್ತದೆ. ಪತ್ನಿಯ ಶಕ್ತಿ ಪತಿಗೆ ಶಕ್ತಿಯಾಗಿದೆ; ಅವಳು ಅವನ ಪ್ರತಿನಿಧಿಯಾಗಿ, ಅವನಿಗೆ ಗೌರವ ತಂದುಕೊಡುವಂತೆ, ತನ್ನದೇ ಆದ ಸ್ವಭಾವ, ಗುಣ ಮತ್ತು ನಂಬಿಕೆಗಳನ್ನು ಪ್ರದರ್ಶಿಸುತ್ತಾಳೆ.





## 4. ಕೂಶ್ಮಾಂಡ

**ಸ್ತ್ರೀತ್ವದ ಅರಿವು**

ಕೂಶ್ಮಾಂಡ ರೂಪ ಮಹಿಳೆಯ ದೇಹಶಾಸ್ತ್ರದ ಒಂದು ಮಹಾನ್ ಸತ್ವವನ್ನು ನೆನಪಿಸುತ್ತದೆ – ಆಕೆ ತನ್ನ ಅಂತರಾಳದಲ್ಲಿ ಗರ್ಭವನ್ನು, ಜೀವದ ಬೀಜವನ್ನು ಧರಿಸುವ ಶಕ್ತಿ ಹೊಂದಿದ್ದಾಳೆ. ಹೆಣ್ಣು ತನ್ನ ಮಾಸಿಕ ಚಕ್ರದ ನಂತರ ಪೂರ್ಣ ಸ್ತ್ರೀತ್ವವನ್ನು ಅರ್ಥಮಾಡಿಕೊಳ್ಳುತ್ತಾಳೆ. ಈ ಹಂತದಲ್ಲಿ ಆಕೆಯೊಳಗಿನ ಸೃಜನಶೀಲ ಶಕ್ತಿ ಪ್ರಕೃತಿಯಂತೆ ಫಲಪ್ರದವಾಗುತ್ತದೆ. ಕೂಶ್ಮಾಂಡ ಎಂದರೆ 'ಅಂಡವನ್ನು ಉಂಟುಮಾಡುವವಳು' – ಜೀವನದ ಮೂಲವನ್ನು ತನ್ನೊಳಗೆ ಸಾಗಿಸುವ ಅಚ್ಚರಿಯ ಶಕ್ತಿ.